# ಮೈಸೂರು ಸಂಸ್ಥಾನದಲ್ಲಿ ಬಾಬಾಸಾಹೇಬ್ ಅಂಬೇಡ್ಕರ್

**ಡಾ. ಕುಪ್ಪನಹಳ್ಳಿ ಎಂ. ಭೈರಪ್ಪ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಕ್ರಿಸ್ತು ಜಯಂತಿ ಕಾಲೇಜು (ಸ್ವಾಯತ್ತ)
ಕೆ. ನಾರಾಯಣಪುರ, ಬೆಂಗಳೂರು-77.

**ಭಾರತ ಸಂವಿಧಾನ ಸೂರ್ಯನ್ ನಿತ್ಯವೂ ಮೂಡಿದೊಡಂ**
**ಆರದರಿವು ಜ್ಯೋತಿಜಲಂ ಜಗಮೆಲ್ಲಮಂ ಬೆಳಗಿದೊಡಂ**
**ಬೋಧಿಯಾನದಿ ಬಸವಳಿಯದ ಜನಮನಂಗಳ ಕಂಡೊಡಂ**
**ಆರಂಕುಸಮಿಟ್ಟೊಡಂ ನೆನವುದೆನ್ನ ಮನಂ ಅಂಬೇಡ್ಕರರಂ**

ಆಧುನಿಕ ಭಾರತದ ನಿರ್ಮಾಣದಲ್ಲಿ ಪ್ರಧಾನ ಪಾತ್ರ ವಹಿಸಿದ ಬಾಬಾಸಾಹೇಬ್ ಅಂಬೇಡ್ಕರ್ ಅವರು ಪ್ರಾತಃಸ್ಮರಣೀಯರು. ಸರ್ವಜನರ ಸಮಾನ ಜೀವನ ಕಟ್ಟುಗೆಯ ಮಹದಾಶಯವುಳ್ಳ "ಭಾರತ ಸಂವಿಧಾನ"ವೆಂಬ ಮಹತ್ಕೃತಿ ರಚನೆಯ ಮಹತ್ಕಾರ್ಯದಲ್ಲಿ ತೊಡಗಿಸಿಕೊಂಡು ಅಪೂರ್ವ ಕೊಡುಗೆ ನೀಡಿ "ಸಂವಿಧಾನ ಶಿಲ್ಪಿ" ಎನಿಸಿಕೊಂಡ ಭಾರತದ ಬಹುಜನ ನಾಯಕರು. ವಿಶ್ವಮಟ್ಟದಲ್ಲಿ ಅಧ್ಯಯನ ನಡೆಸಿ, ಭಾರತದಾದ್ಯಂತ ತಿರುಗಾಡಿ ಬಹುಜನ ಬಡವರ, ಅಸ್ಪೃಶ್ಯರ, ಮಹಿಳೆಯರ, ಶೋಷಣೆ-ತುಳಿತಕ್ಕೊಳಗಾದವರ ಬದುಕುಗಳನ್ನು ಹಸನು ಮಾಡಿ ಹೊಸಬದುಕುಗಳನ್ನು ಕಟ್ಟಿಕೊಡಲು ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟರು. ಅವರ ಈ ಅದಮ್ಯ ಜನಪರ ಯಾನದಲ್ಲಿ ಆದಂತಹ ಅವಮಾನಗಳು, ನೋವುಗಳು, ಕಷ್ಟ-ನಷ್ಟಗಳು ಅಷ್ಟಿಷ್ಟಲ್ಲ. ಭಾರತೀಯ ನೆಲ ಕಂಡಂತಹ ಅಪ್ರತಿಮ ದೇಶಪ್ರೇಮಿ – ಪ್ರಬುದ್ಧ ಪರಾಕ್ರಮಿ. ದಮನಿತ ಭಾರತ ಬಿಡುಗಡೆಗಾಗಿ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದ ನಿಜ ಸ್ವಾತಂತ್ರ್ಯ ಸೇನಾನಿ ಅಂಬೇಡ್ಕರ್. ಅವರನ್ನು ದಲಿತ ಸೂರ್ಯನೆಂದು ಸೀಮಿತಗೊಳಿಸಲು ಯತ್ನಿಸಿದರೂ ಅವರು 'ನಾ ನಿಲ್ಲುವಳಲ್ಲ'ವೆಂಬಂತೆ ಇಡೀ ಭಾರತವನ್ನು ಬೆಳಗುವ ನಿತ್ಯನೂತನ ಸೀಮಾತೀತ ಸೂರ್ಯನಾಗಿಯೇ ಕಂಗೊಳಿಸುತ್ತಿದ್ದಾರೆ.

ಅಂಬೇಡ್ಕರ್ ಅವರು ಭಾರತ ಸಂವಿಧಾನ ರಚನೆ ಮತ್ತು ಸಮರ್ಪಣೆಯ ನಂತರದಲ್ಲಿ ತಮ್ಮ ಮುಂದಿನ ಸಂಪೂರ್ಣ ಬದುಕನ್ನು ಬಹುಜನರ ಬಾಳಬೆಳಕಾದ ಬೌದ್ಧಯಾನಕ್ಕೆ ಮೀಸಲಾಗಿರಿಸಿಕೊಂಡಿದ್ದರು. ಒಮ್ಮೆ ಅವರು ಬುದ್ಧತ್ವ ಮತ್ತು ಜಾತಿವಿನಾಶವನ್ನು ಕುರಿತು ಮಾತನಾಡುತ್ತ, "ನನ್ನ ಜೀವನದ ಕೊನೆಯ ದಿನಗಳನ್ನು ಬೌದ್ಧಧರ್ಮ ಪ್ರಚಾರಕ್ಕಾಗಿಯೇ ವ್ಯಯಿಸಬೇಕೆಂದು ನಿರ್ಧರಿಸಿದ್ದೇನೆ. ನಾನು ಈ ಬೌದ್ಧಧರ್ಮದ ಪ್ರಚಾರದ ಹೊಲವನ್ನು ಬಿತ್ತುವವನಿದ್ದೇನೆ ಮತ್ತು ಅದರಲ್ಲಿ ಯಾವ ಬೆಳೆಯು ಬರುತ್ತದೆ ಎಂಬುದನ್ನೂ ನೋಡುವವನಿದ್ದೇನೆ... ಮೋಜಿನಲ್ಲಿ ಇರುವವರಿಗೆ ತಮ್ಮ ಕಾಲಿನ ಕೆಳಗೆ ಏನು ಕೊಳೆಯುತ್ತಿದೆ ಎಂಬುದರ ಅರಿವಾಗುವುದಿಲ್ಲ. ಈ ಜಾತಿಭೇದದ ಸಮಾಜ ರಚನೆಯನ್ನು ಒಂದೊಮ್ಮೆ ತಿರುವಿ ಕೆಳಗೆ ಬೀಳಿಸುವುದಕ್ಕಾಗಿಯಾದರೂ ನಾವು ಬೌದ್ಧಧರ್ಮದ ಜ್ಞಾನವನ್ನು ಅರಿಯಬೇಕಾಗಿದೆ. ಈ ವಿಚಾರವನ್ನು ನಾನು ಕೇವಲ ಗಂಟಲಿನಿಂದಷ್ಟೇ ಹೇಳುತ್ತಿಲ್ಲ; ಹೊಕ್ಕುಳ ಬಳ್ಳಿಯ ಮೂಲದಿಂದ ನುಡಿಯುತ್ತಿದ್ದೇನೆ..."[1] ಎನ್ನುತ್ತಾರೆ. ಹೀಗೆ, ಭಾರತದಾದ್ಯಂತ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಬೌದ್ಧಯಾನವನ್ನು ಕೈಗೊಂಡು ಬಹುಜನರ ಬದುಕುಗಳನ್ನು ಸುಧಾರಿಸಿ ಪ್ರಜಾಪ್ರಭುತ್ವ ಪಾತಳಿಯ ಪ್ರಬುದ್ಧ ಭಾರತವನ್ನು ಕಟ್ಟುವುದರ ಕಡೆಗೆ ಕನಸುಕಂಡಿದ್ದರು. ಈ ಕುರಿತಾಗಿ ನೀಲನಕ್ಷೆಯೊಂದನ್ನು ಸಿದ್ಧಪಡಿಸಿಟ್ಟುಕೊಂಡು ಕಾರ್ಯೋನ್ಮುಖರಾಗಿದ್ದರು. ಈ ಬೌದ್ಧಯಾನದ ಪ್ರಾರಂಭಕ್ಕಾಗಿ ಅವರು ಆಯ್ಕೆ ಮಾಡಿಕೊಂಡ ನೆಲವು ದಕ್ಷಿಣ ಭಾರತದ ಅಂದಿನ 'ಮೈಸೂರು ಸಂಸ್ಥಾನ'ವೇ ಆಗಿತ್ತು ಎಂಬುದು ತುಂಬಾ ವಿಶೇಷವೂ ಕುತೂಹಲಕಾರಿಯೂ ಆದ ಸಂಗತಿಯಾಗಿದೆ. ಅಂಬೇಡ್ಕರ್ ಅವರಿಗೆ ಮೈಸೂರು ಸಂಸ್ಥಾನದ ಜನಪರ ಆಡಳಿತವನ್ನು ಕುರಿತು ಮೆಚ್ಚುಗೆಯಿತ್ತು. ಆಧುನಿಕ ಭಾರತದಲ್ಲಿ ಅಸ್ಪೃಶ್ಯರ ಸ್ಥಿತಿಗತಿಗಳನ್ನು ಅವಲೋಕಿಸುವ ಸಂದರ್ಭವೊಂದರಲ್ಲಿ ಅವರು ಮೈಸೂರು ಸಂಸ್ಥಾನದ ಅಸ್ಪೃಶ್ಯಪರವಾದ ಪ್ರಗತಿಶೀಲ ನಡೆಯನ್ನು ಇತರ ಸಂಸ್ಥಾನಗಳೊಂದಿಗೆ ಮೌಲ್ಯೀಕರಿಸುತ್ತಾರೆ.

1941ರ ಫೆಬ್ರವರಿ 23ರಂದು ನಡೆದ ಹೊಲೆಯ-ಮಾದಿಗರ ಸಮಾವೇಶವೊಂದರಲ್ಲಿ ನಿಜಾಮ ಸಂಸ್ಥಾನದ ಅಸ್ಪೃಶ್ಯರ ಸ್ಥಿತಿಗತಿಯನ್ನು ಕುರಿತು ಅಂಬೇಡ್ಕರರು ಮಾತನಾಡುತ್ತ, "ಹಿಂದೂಸ್ಥಾನದಲ್ಲಿರುವ ಮೂರು ಸಂಸ್ಥಾನಗಳಲ್ಲಿ ನಿಜಾಮ ರಾಜ್ಯವು ಮೊದಲ ದರ್ಜೆಯದು. ಅದಕ್ಕೆ ಹೋಲಿಸಿದರೆ ಬರೋಡಾ ರಾಜ್ಯವು ಚಿಕ್ಕದು? ಆದರೆ ಈ ಸಂಸ್ಥಾನವು ಅಸ್ಪೃಶ್ಯರಿಗೆ ಶಿಕ್ಷಣ ವ್ಯವಸ್ಥೆಯನ್ನು ಮಾಡಿದೆ. ಮೈಸೂರು ಸಂಸ್ಥಾನದಲ್ಲಿಯೂ ಅಲ್ಲಿಯ ಅಸ್ಪೃಶ್ಯರಿಗೆ ಭೂಮಿ ಸಿಕ್ಕಿದೆ. ಕಂದಾಯದ ರಿಯಾಯಿತಿಯೂ ಸಿಕ್ಕಿದೆ..."[2] ಎಂದು ಮೆಚ್ಚುತ್ತಾರೆ. ಅಷ್ಟಲ್ಲದೆ, ಅಂಬೇಡ್ಕರರ ದೇವಾಲಯ ಪ್ರವೇಶ ಚಳವಳಿ ಹಾಗೂ ಮತಾಂತರ ಚಳವಳಿಯ ಪ್ರಭಾವಕ್ಕೆ ಒಳಗಾದ ಮೈಸೂರು ಸಂಸ್ಥಾನವು ಇಲ್ಲಿನ ದಲಿತರಿಗೆ ದೇವಾಲಯ ಪ್ರವೇಶಿಸಲು ಅವಕಾಶ ಮತ್ತು ಮೈಸೂರು ದಸರಾ ಹಬ್ಬದಲ್ಲಿ ದಲಿತರೂ ಪಾಲ್ಗೊಳ್ಳುವಂಥ ಹಲವಾರು ಜನಪರ ವಿದ್ಯಮಾನಗಳು ಜರುಗುತ್ತವೆ. ಈ ಕುರಿತು ಅಂಬೇಡ್ಕರರ ಜೀವಿತಾವಧಿಯಲ್ಲೇ ಅವರ ಜೀವನ ಚರಿತ್ರೆಯನ್ನು ಬರೆದ ಧನಂಜಯ ಕೀರ್ ಅವರು ಹೀಗೆ ದಾಖಲಿಸಿದ್ದಾರೆ: "Ambedkar's threat of conversion produced widespread repercussions, arousing the social conscience of the caste Hindus to the sense of injustice which they had inflicted for centuries upon the untouchable Hindus. India was now preparing for a giant stride for the removal of untouchability. A few days earlier the Mysore State Government had declared for the first time in its history that the Harijans would take part in the

Dasara Durbar celebrations…"[3] ಮೈಸೂರಿನ ಪ್ರಜಾರಾಜರೆಂದೂ, ರಾಜರ್ಷಿಯೆಂದೂ ಪ್ರಸಿದ್ಧರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಅವರ ಆಪ್ತ ಸ್ನೇಹಿತರಾಗಿದ್ದ ಕೊಲ್ಲಾಪುರದ ಶಾಹು ಮಹರಾಜ್ ಅವರೊಂದಿಗೆ ನಡೆದ ಪತ್ರಸಂವಾದಗಳಲ್ಲಿ ಅಂಬೇಡ್ಕರರ ಸ್ಮರಣೆ ಇರುವ ದಾಖಲೆಗಳೂ ಇವೆ.

ಮೈಸೂರು ಸಂಸ್ಥಾನದ ಮಹಾರಾಜರನ್ನು ಮಾತ್ರವಲ್ಲದೇ ಮಹಾಕವಿಗಳನ್ನೂ ಬಾಬಾಸಾಹೇಬರು ಪ್ರಭಾವಿಸಿದ್ದರು. ವಿಶ್ವಮಾನವ ಕವಿಯೆಂದೇ ಪ್ರಸಿದ್ಧರಾದ ಕುವೆಂಪು ಅವರು, ಅಂಬೇಡ್ಕರ್ ಅವರನ್ನು ನಾರಾಯಣಗುರು, ಬಸವೇಶ್ವರ ಹಾಗೂ ಸ್ವಾಮಿ ವಿವೇಕಾನಂದರಂತೆ ಅಪ್ರತಿಮ ರಾಷ್ಟ್ರನಾಯಕರೆಂದೂ[4] ಮಹಾಮೇಧಾವಿಯೆಂದೂ[5] ಭಾವಿಸಿಕೊಂಡಿದ್ದರು. ಸ್ವಾತಂತ್ರ್ಯೋತ್ತರ ಭಾರತ ನಿರ್ಮಾಣಕ್ಕಾಗಿ ಅಂಬೇಡ್ಕರ್ ಮುಖ್ಯಭೂಮಿಕೆಯಲ್ಲಿ ರಚನೆಗೊಂಡ 'ಭಾರತ ಸಂವಿಧಾನ'ವನ್ನು ಹೃದಯತುಂಬಿ ಸ್ವಾಗತಿಸಿದ ಕುವೆಂಪು ಅವರು ಇದಕ್ಕೆ ಭೀಮಸ್ಪಂದನೆಯೆಂಬಂತೆ "...ಕೊನೆಗೊಂಡಿತು ಓರೋರ್ವರ ಗರ್ವದ ಕಾಲ, ಇದು ಸರ್ವರ ಕಾಲ; ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು... ಶ್ರೀಸಾಮಾನ್ಯನೇ ಭಗವನ್ ಮಾನ್ಯಂ, ಶ್ರೀಸಾಮಾನ್ಯವೇ ಭಗವತ್ ಧನ್ಯಂ..."[6] ಎಂದು 'ಶ್ರೀಸಾಮಾನ್ಯನಿಗೆ ದೀಕ್ಷಾಗೀತೆ' ಎಂಬ ಕಾವ್ಯವನ್ನು ಕಟ್ಟುತ್ತಾರೆ. ಕವಿತೆಯ ಅಡಿಟಿಪ್ಪಣಿಯಲ್ಲಿ, ಭಾರತ ಸಂವಿಧಾನವನ್ನು ದೇಶಕ್ಕೆ ಸಮರ್ಪಣೆ ಮಾಡಿದ ಸುದ್ದಿಯನ್ನು ತಮ್ಮ ಮನೆಯ ಆಕಾಶವಾಣಿಯಿಂದ ಕೇಳಿಸಿಕೊಂಡು ಬರೆದ ಕವಿತೆಯಿದು ಎಂದಿದ್ದಾರೆ. ಮಾತ್ರವಲ್ಲದೇ, ಭೀಮೋತ್ತರ ಭಾರತದ ದಲಿತನಾಯಕರಲ್ಲಿ ಒಬ್ಬರಾದ ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು ಕುರಿತು ಹೇಳಿದ್ದ 'ಬೂಸಾ' ಮಾತನ್ನು ಬೆಂಬಲಿಸುತ್ತಾರೆ. ಕನ್ನಡವೂ ಸೇರಿದಂತೆ, "ಎಲ್ಲಾ ದೇಶದ ಸಾಹಿತ್ಯದಲ್ಲಿಯೂ ಮುಕ್ಕಾಲುಪಾಲು ಇರುವುದು ಬೂಸಾನೇ.... ಈಗ ನಾವು ಬರೆಯುತ್ತಿರುವುದರಲ್ಲಿಯೂ ಸಹ ಎಷ್ಟೋ ಬೂಸಾ ಸಾಹಿತ್ಯವೆ. ಅದರಲ್ಲಿ ಸ್ವಲ್ಪಮಟ್ಟಿಗೆ ಹಿಂಡೀ ಸಾಹಿತ್ಯ, ಹತ್ತಿಕಾಳು ಸಾಹಿತ್ಯವಿರುತ್ತದೆ"[7] ಎಂದು ಕನ್ನಡ ಸಾಹಿತ್ಯ ಬೂಸಾ ನಿರ್ಮಿತಿಗಳನ್ನು ಆಧಾರ ಸಮೇತ ಜನರ ಮುಂದೆ ಪ್ರಸ್ತುತಪಡಿಸುತ್ತಾರೆ. ಹೀಗೆ ಮೈಸೂರು ಸಂಸ್ಥಾನದಲ್ಲಿ ಮಹಾರಾಜರಾದಿಯಾಗಿ ಮಹಾಸಾಹಿತಿಗಳೂ ಜನನಾಯಕರೂ ಶ್ರೀಸಾಮಾನ್ಯರೂ ಬಾಬಾಸಾಹೇಬ್ ಅಂಬೇಡ್ಕರ್ ಅವರ ನಡೆ–ನುಡಿಗಳ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಭಾವಕ್ಕೆ ಒಳಗಾಗಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ಭಾರತದಲ್ಲಿ 'ಸ್ವಾತಂತ್ರ್ಯ, ಸಮಾನತೆ ಹಾಗೂ ಸೋದರತೆ'ಯ ಆಶಯದಂತೆ ಬೌದ್ಧಚಳುವಳಿ ಕುರಿತಾದ ಒಂದು ನೀಲನಕ್ಷೆಯನ್ನು ತಯಾರಿಸುವ ನಿಮಿತ್ತ ಅಂಬೇಡ್ಕರ್ ಅವರು ಮೈಸೂರು ಸಂಸ್ಥಾನವನ್ನು ಒಳಗೊಂಡಂತೆ ದಕ್ಷಿಣ ಭಾರತಕ್ಕೆ 1954ರ ಜುಲೈ 7 ರಿಂದ 14ರ ವರೆಗೆ ಪ್ರವಾಸ ಕೈಗೊಳ್ಳುತ್ತಾರೆ. ದಕ್ಷಿಣ ಭಾರತದ ಬೌದ್ಧರ ಸಮುದಾಯಗಳ ಸ್ಥಿತಿಯನ್ನು ತಾವೇ ಖುದ್ದಾಗಿ ಕಂಡು, ಅಲ್ಲಿನ ಬೌದ್ಧಧರ್ಮದ ಪರಿಸ್ಥಿತಿಯನ್ನು ಕುರಿತು ಒಂದು ವರದಿಯನ್ನು ಸಿದ್ಧಪಡಿಸುತ್ತಾರೆ.[8] ಈ ಸಂದರ್ಭದಲ್ಲಿ ಕೋಲಾರದ ಕೆ.ಜಿ.ಎಫ್.ನ ಬೌದ್ಧವಿಹಾರಕ್ಕೆ 12–07–1954ರಂದು ಆಗಮಿಸಿ ಪ್ರಾರ್ಥನೆ, ಧ್ಯಾನ ಮಾಡಿ, ಅಲ್ಲಿನ ರಿಜಿಸ್ಟರಿನಲ್ಲಿ ಸಹಿ ಮಾಡಿರುವ ದಾಖಲೆಯೂ ಇದೆ.[9] ಅಲ್ಲದೆ, ಅಲ್ಲಿನ ಜನರು ಇನ್ನೂ ಗುಲಾಮ ಸ್ಥಿತಿಯಲ್ಲಿರುವುದನ್ನು ಕಂಡು ಬೇಸರ ವ್ಯಕ್ತಪಡಿಸಿದರೆಂದೂ ಅಲ್ಲಿನ ಜನ ಈಗಲೂ ಹೇಳುತ್ತಾರೆ. ಇಂಥ ಪ್ರವಾಸದ ಸಂದರ್ಭದಲ್ಲಿ ಅಂಬೇಡ್ಕರರಿಗೆ ತಾವು ಕಂಡ ಬೌದ್ಧಕೇಂದ್ರಗಳು ಸುಮಾರು ವರ್ಷಗಳಿಂದ ಅಸ್ತಿತ್ವದಲ್ಲಿರುವ ಸಂಗತಿ ತಿಳಿಯುತ್ತದೆ. ಆದರೆ ಅವುಗಳಲ್ಲಿ ಕೆಲವು ತೀರಾ ಕರ್ಮಠರಿಂದಲೂ, ಜಾತಿವಾದಿಗಳಿಂದಲೂ ಸುತ್ತುವರೆಯಲ್ಪಟ್ಟಿರುವುದನ್ನು ಗುರ್ತಿಸುತ್ತಾರೆ. ಕೆಲವು ಕಡೆ ಸ್ಥಳೀಯ ಬೌದ್ಧರ ಸಂಪನ್ಮೂಲಗಳಿಂದ ಕಟ್ಟಿರುವ ವಿಹಾರಗಳು ಕಳಪೆ ಗುಣಮಟ್ಟದ್ದಾಗಿವೆಯೆಂದು ತಿಳಿಸುತ್ತಾ, ಅವನ್ನು ನವೀಕರಿಸಲು, ಪುನರ್ ನಿರ್ಮಿಸಲು, ದುರಸ್ತಿ ಮಾಡಲು ಸ್ವಲ್ಪ ಸಹಾಯವನ್ನು ಮಾಡಿದರೆ ಅವರನ್ನು ಪ್ರೋತ್ಸಾಹಿಸಿದಂತೆ ಆಗುತ್ತದೆ ಎಂದೂ ಯೋಚಿಸುತ್ತಾರೆ. ಈ ಹೊತ್ತಿನಲ್ಲೇ, ಬಹುಮುಖ್ಯವಾಗಿ ಮೈಸೂರು ರಾಜ್ಯ ಕೇಂದ್ರಿತವಾಗಿ ಬೌದ್ಧಧರ್ಮ ಪ್ರಸಾರಕಾಯಕವನ್ನು ಕೈಗೊಳ್ಳುವ ಬಹುಮುಖ್ಯ ಯೋಜನೆಯು ಬಾಬಾಸಾಹೇಬರಿಂದ ರೂಪುಗೊಳ್ಳುತ್ತದೆ.

ಬಾಬಾಸಾಹೇಬರು ಅಂದಿನ ಮೈಸೂರು ಪ್ರಾಂತ್ಯದ ಬೆಂಗಳೂರಿನ ಫ್ರೇಜರ್ ಟೌನ್ (ಬೆಂಗಳೂರು ಕಂಟೋನ್ಮೆಂಟ್) ಮತ್ತು ಸೆಂಟ್ರಲ್ ಜೈಲ್ ಹತ್ತಿರ (ಬೆಂಗಳೂರು ಸಿಟಿ) ಹಾಗೂ ಕೋಲಾರ ಜಿಲ್ಲೆಯ ಕೆ.ಜಿ.ಎಫ್.ನ ಬೌದ್ಧವಿಹಾರಗಳಿಗೆ ಭೇಟಿ ನೀಡುತ್ತಾರೆ. ಜುಲೈ 8ರಂದು ಬೆಂಗಳೂರಿಗೆ ಆಗಮಿಸಿದ ಬಾಬಾಸಾಹೇಬರಿಗೆ ಅಂದಿನ ಮೈಸೂರಿನ ರಾಜಪ್ರಮುಖರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರಿಂದ ಗೌರವ ಆತಿಥ್ಯ ದೊರೆಯುತ್ತದೆ. ಇದರಿಂದ ಸಂತಸಗೊಂಡ ಅಂಬೇಡ್ಕರ್ ಅವರು, ಬೌದ್ಧಸಂಸ್ಕೃತಿ ಪ್ರಸಾರಕ್ಕಾಗಿ ಈ ಮೈಸೂರು ಪ್ರಾಂತದಲ್ಲಿ ತಮಗೊಂದು ಜಮೀನನ್ನು ನೀಡಲು ವಿನಂತಿಸಿಕೊಳ್ಳುತ್ತಾರೆ. ಇದಕ್ಕೆ ಒಪ್ಪಿದ ಜಯಚಾಮರಾಜ ಒಡೆಯರ್ ಅವರು ತಮ್ಮ ಉದಾರ ಮನಸ್ಸಿನಿಂದ, ಈ ಹಿಂದೆ ಬೆಂಗಳೂರಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪನೆ ಮಾಡಿದ್ದ ಭಾರತೀಯ ವಿಜ್ಞಾನ ಸಂಸ್ಥೆಯ ಪಕ್ಕದಲ್ಲೇ ಇದ್ದ ಸುಂದರವಾದ 5 ಎಕರೆ ಜಾಗವನ್ನು ದಾನವಾಗಿ ನೀಡುತ್ತಾರೆ. ಈ ಕುರಿತು ಅಂಬೇಡ್ಕರ್ ಅವರಿಗೆ ಮಹಾರಾಜರ ಖಾಸಗಿ ಕಾರ್ಯದರ್ಶಿಯವರಿಂದ ಒಂದು ಮುಖ್ಯ ಪತ್ರವನ್ನು ಸಹ ರವಾನಿಸಲಾಗುತ್ತದೆ. ಈ ವಿದ್ಯಮಾನವನ್ನು ಕುರಿತು ಅದೇ ಸಂದರ್ಭದಲ್ಲಿ ಬಿಡುಗಡೆಯಾದ ಧನಂಜಯ ಕೀರ್ ಅವರು ತಮ್ಮ "Dr. AMBEDKAR LIFE AND MISSION" ಕೃತಿಯಲ್ಲಿ ಹೀಗೆ ದಾಖಲಿಸಿದ್ದಾರೆ: "Another announcement made in the early part of the year by Dr.Ambedkar was regarding the starting of a Buddhist Seminary at Bangalore to train preachers for propagating the faith in India. A plot of five acres of land was donated by the Maharaja of Mysore when Dr. Ambedkar had met him at Bangalore in 1954. This was the result of his two visits to Burma. The World Buddhist Council and the Buddha Sasana Council had promised him financial and technical help. He would shortly set out, he said, with the begging bowl for public contributions. The Seminary would be provided with temples and class-rooms; and furnished with a large library, a dormitory for teachers, students and research scholars, and a press to print books written by eminent scholars from all over the world commissioned to write books on Buddhism.."[10] ಇಂಥ ಮಹತ್ವದ

ಸಂಗತಿಯನ್ನು ಅಂಬೇಡ್ಕರ್ ಅವರು ದಾಖಲಿಸುತ್ತಾ, "ಮೈಸೂರು ರಾಜ್ಯದ ರಾಜಪ್ರಮುಖರಾದ ಮಹಾರಾಜರನ್ನು ನಾನು 8ನೇ ಜುಲೈ ತಾರೀಖಿನಂದು ಭೇಟಿ ಮಾಡಿದೆ. ಅವರ ಸ್ವಂತ ಆಸ್ತಿಯಾದ ಒಂದು ತುಂಡು ಭೂಮಿಯನ್ನು ನಮ್ಮ ಕೆಲಸಗಳಿಗಾಗಿ ಒಂದು ಕೇಂದ್ರವನ್ನು ನಿರ್ಮಿಸಲು ದಾನವಾಗಿ ಕೊಡಿ ಎಂದು ಪ್ರಾರ್ಥಿಸಿದೆ. ಮಹಾರಾಜರು ದಯೆ ಇಟ್ಟು 5 ಎಕರೆ ಭೂಮಿಯನ್ನು ದಾನವಾಗಿ ಕೊಡಲು ಒಪ್ಪಿದ್ದಾರೆ. ಸುಂದರವಾದ ತಾಣದಲ್ಲಿರುವ ಸುಂದರವಾದ ಭೂಮಿ ಇದಾಗಿದೆ. ಇದು ಬಹಳ ಬೆಲೆಬಾಳುವ ಭೂಮಿಯಾಗಿದೆ. ಬೌದ್ಧ ಧಾರ್ಮಿಕ ಪಾಠಶಾಲೆಯನ್ನು ಕಟ್ಟಲು ಈ ಭೂಮಿಯನ್ನು ಉಪಯೋಗಿಸಿಕೊಳ್ಳಬೇಕೆಂದುಕೊಂಡಿದ್ದೇನೆ. ನಮ್ಮ ಭಿಕ್ಕುಗಳಿಗೆ ಮತ್ತು ನಮ್ಮ ಪ್ರಚಾರಕರುಗಳಿಗೆ ಒಂದು ತರಬೇತಿ ಕೇಂದ್ರವನ್ನಾಗಿ ಉಪಯೋಗಿಸುವ ಸಲುವಾಗಿ ಈ ಧಾರ್ಮಿಕ ಪಾಠಶಾಲೆ ಉಪಯೋಗಕ್ಕೆ ಬರುತ್ತದೆ. ದಕ್ಷಿಣ ಭಾರತದಲ್ಲಿ ಬೌದ್ಧಧರ್ಮ ಪ್ರಚಾರಕ್ಕೆ ಒಂದು ಕೇಂದ್ರ ಸಹ ಆಗುತ್ತದೆ..."[11] ಎಂದು ಆಶಿಸಿದ್ದಾರೆ. 1955ರ ಜನವರಿ 11ರಂದು ಬೊಂಬಾಯಿಯಲ್ಲಿ ಮಾತನಾಡುತ್ತ, "ಭಾರತದಲ್ಲಿ ಬೌದ್ಧಧರ್ಮ ಪ್ರಚಾರದ ಮೊದಲ ಹೆಜ್ಜೆಯಾಗಿ ಮೊದಲ ಬೌದ್ಧಧರ್ಮದ ಬೋಧನಾ ಶಾಲೆಯನ್ನು ಬೆಂಗಳೂರಿನಲ್ಲಿ ನಡೆಸಲಾಗುವುದು"[12] ಎಂದು ತಿಳಿಸುತ್ತಾರೆ ಅಂಬೇಡ್ಕರ್.

ಅಂದು ಮೈಸೂರು ರಾಜ್ಯದಲ್ಲಿ ಅಂಬೇಡ್ಕರ್ ಪ್ರಾರಂಭಿಸಬೇಕೆಂದಿದ್ದ ಬೌದ್ಧ ಕೇಂದ್ರವು ಮತೀಯ ವಿಕಾರಗಳಿಂದ ಕೂಡಿರುವುದಿಲ್ಲವೆಂದು ಸ್ಪಷ್ಟಪಡಿಸಲಾಗಿತ್ತು. "ಈ ಸಂಸ್ಥೆಗೆ ಜಾತಿ, ಧರ್ಮ, ರಾಷ್ಟ್ರೀಯತೆ ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ವಿದ್ಯಾರ್ಥಿಗಳನ್ನು ಸೇರ್ಪಡೆ ಮಾಡಿಕೊಳ್ಳಲಾಗುವುದು. ಅಲ್ಲಿ ಅವರಿಗೆ ಬೌದ್ಧಧರ್ಮ ಮತ್ತು ಇತರ ಧರ್ಮಗಳ ತೌಲನಿಕ ಅಧ್ಯಯನಕ್ಕೆ ಅವಕಾಶ ನೀಡಲಾಗುವುದು... ವಿಶ್ವದ ಎಲ್ಲೆಡೆಯಿಂದ ಪ್ರಸಿದ್ಧ ಭಾಷಾಂತರಕಾರರಿಂದ ಬೌದ್ಧಧರ್ಮಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ಪಾಲಿಯಿಂದ ಹಲವು ಭಾಷೆಗಳಿಗೆ ಭಾಷಾಂತರ ಮಾಡಿಸಿ ಈ ಸಂಸ್ಥೆಯಿಂದ ಪ್ರಕಟಿಸಲಾಗುವುದು..."[13] ಎಂದಿದ್ದ ಅಂಬೇಡ್ಕರು ಅವರು, ಇಲ್ಲಿ ಧರ್ಮ ಮತ್ತು ತತ್ವಶಾಸ್ತ್ರದ ಪುಸ್ತಗಳನ್ನು ಹೊಂದಿರುವ ಒಂದು ದೊಡ್ಡ ಗ್ರಂಥಾಲಯವನ್ನೂ ನಿರ್ಮಿಸುವುದಲ್ಲದೆ, ಇಲ್ಲಿಗೆ ಬರುವ ವಿದ್ಯಾರ್ಥಿಗಳು, ಅಧ್ಯಯನಕಾರರು ಹಾಗೂ ಶಿಕ್ಷಕರ ಅಧ್ಯಯನ ಮತ್ತು ಸಂಶೋಧನೆಗೆ ತೊಡಕಾಗದಂತೆ ಕೊಠಡಿಗಳು ಮತ್ತು ಧ್ಯಾನಮಂದಿರಗಳನ್ನು ನಿರ್ಮಿಸುವ ಯೋಜನೆಯನ್ನೂ ತಯಾರಿಸಿಕೊಂಡಿದ್ದರು. ಬೆಂಗಳೂರಿನ ಈ ಯೋಜಿತ ಕೇಂದ್ರದ ಮುಖೇಣ ಬೌದ್ಧಸ್ಥಳೀಯತೆಯನ್ನು ಸೀಮಾತೀತಗೊಳಿಸಿ ವೈಶ್ವಿಕ ನೆಲೆಗೆ ತರುವ ಮತ್ತು ಬೌದ್ಧವೈಶ್ವಿಕತೆಯ ಮೂಲಕ ಸ್ಥಳೀಯ ಬೌದ್ಧತ್ವವನ್ನು ಸಂಪನ್ನಗೊಳಿಸುವಂತಿದ್ದ ಅಂಬೇಡ್ಕರರ ಧ್ಯೇಯೋದ್ದೇಶವು ಮಹತ್ತರವಾದುದಾಗಿದೆ.ಇಲ್ಲಿ ಸಂಘಕ್ಕೆ ಸೇರಿದ ಬಿಕ್ಕುಗಳನ್ನು ಕುರಿತು ಬುದ್ಧ ಹೇಳಿದ ಮಾತೊಂದು ನೆನಪಾಗುತ್ತದೆ. "ಓ ಭಿಕ್ಕುಗಳೇ, ನೀವು ಬೇರೆ ಬೇರೆ ದೇಶಗಳಿಂದ, ಬೇರೆ ಬೇರೆ ಜಾತಿಗಳಿಂದ ಬಂದಿದ್ದೀರಿ. ನಿಮ್ಮ ಪ್ರದೇಶಗಳಲ್ಲಿ ನದಿಗಳು ಹರಿಯುತ್ತವೆ, ಅವು ಪರಸ್ಪರ ಬೇರೆಯಾಗಿರುತ್ತವೆ. ಅವುಗಳು ಯಾವಾಗ ಸಾಗರವನ್ನು ಸೇರುತ್ತವೆಯೋ ಆಗ ಅವುಗಳಿಗೆ ಆ ಪ್ರತ್ಯೇಕತೆಯು ಉಳಿಯುವುದಿಲ್ಲ. ಅವುಗಳು ಏಕಜೀವ ಮತ್ತು ಸಮಾನವಾಗಿರುತ್ತವೆ. ಬೌದ್ಧಸಂಘವು ಸಾಗರದ ಹಾಗೆ ಇದೆ; ಈ ಸಂಘದಲ್ಲಿ ಎಲ್ಲರೂ ಒಂದೇ ಮತ್ತು ಪರಸ್ಪರ ಸಮಾನರು."[14] ಎಂಬುದು ಬೌದ್ಧಯಾನದ ಜನಮೈತ್ರಿ–ಜಗಮೈತ್ರಿಗೆ ದಾರ್ಶನಿಕ ದಿಕ್ಸೂಚಿಯಾಗಿದೆ.

ಬಾಬಾಸಾಹೇಬರು ಬರ್ಮಾದ ರಂಗೂನಿನಲ್ಲಿ 1954ರ ಡಿಸೆಂಬರ್ 4ರಂದು ನಡೆದ "ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ"ದಲ್ಲಿ ಭಾಷಣದ ಜೊತೆಗೆ ತಾವು ಸಿದ್ಧಪಡಿಸಿದ್ದ ಇಂಥ ಬೌದ್ಧಚಳವಳಿಯ ನೀಲನಕ್ಷೆಯನ್ನು ಪ್ರಸ್ತುತಪಡಿಸಿದಾಗಲೇ ಅವರಿಗೆ ವಿಶ್ವದಾದ್ಯಂತ ಬೆಂಬಲ ಸಿಕ್ಕಿತ್ತು. ಮುಂದೆ ಇದು ವಿಶ್ವದಾದ್ಯಂತ ಎಷ್ಟು ಪ್ರಭಾವ ಬೀರಿತೆಂದರೆ, ಅಮೇರಿಕಾ, ಜಪಾನ್ ಮೊದಲಾದ ದೇಶಗಳ ಬೌದ್ಧರು, ಬೌದ್ಧಪರ ಒಲವುಳ್ಳವರು ಅಂಬೇಡ್ಕರರ ಬೌದ್ಧಯಾನವನ್ನು ಪ್ರೋತ್ಸಾಹಿಸಿ ಆರ್ಥಿಕವಾಗಿ ಹಾಗೂ ನೈತಿಕವಾಗಿ ಅಭೂತಪೂರ್ವ ಬೆಂಬಲಗಳನ್ನು ನೀಡುತ್ತಾರೆ. ವಿಶ್ವ ಬೌದ್ಧ ಸಂಸ್ಥೆ ಹಾಗೂ ಬುದ್ಧ ಶಾಸನ ಸಂಸ್ಥೆಗಳು ಎಲ್ಲ ರೀತಿಯ ನೆರವು ನೀಡಲು ಮುಂದಾಗುತ್ತವೆ. ವಿಶ್ವದ ಹಲವಾರು ಬೌದ್ಧಪ್ರಾಜ್ಞರು ಬಾಬಾಸಾಹೇಬರನ್ನು 'ಭಾರತ ಕಂಡ ಮಹಾ ಬೌದ್ಧನಾಯಕ'ರೆಂದು ಕೊಂಡಾಡುತ್ತಾರೆ. ಅಲ್ಲದೇ, ತಮ್ಮ ದೇಶಗಳು ಮತ್ತು ಭಾರತದ ನಡುವೆ ಬೌದ್ಧಜ್ಞಾನ ಹಾಗೂ ಬೌದ್ಧಸಂಸ್ಕೃತಿಯನ್ನು ಕೊಡು–ಕೊಳುವ ಆಶಯವನ್ನು ವ್ಯಕ್ತಪಡಿಸುತ್ತಾರೆ. ಜಪಾನ್ ದೇಶದ ಬೌದ್ಧ ಪ್ರಾಜ್ಞರೊಬ್ಬರು, ಅಂಬೇಡ್ಕರ್ ಅವರಿಂದ ಇಷ್ಟೆಲ್ಲ ಬೌದ್ಧಸಾಧನೆ ಮಾಡಲು ಹೇಗೆ ಸಾಧ್ಯವಾಯಿತು ಎಂದು ಅಚ್ಚರಿ ವ್ಯಕ್ತಪಡಿಸಿ ತಾವೂ ಅವರೊಂದಿಗೆ ದುಡಿಯುವ ಹಂಬಲವನ್ನು ವ್ಯಕ್ತಪಡಿಸುತ್ತಾರೆ. ಇಂಥ ಸಹಕಾರ ಸಾಗರವೇ ಹರಿದುಬಂದಂತೆ ಅಂಬೇಡ್ಕರರು ಮತ್ತಷ್ಟು ಉತ್ತೇಜಿತಗೊಂಡು ಕಾರ್ಯೋನ್ಮುಖರಾಗುತ್ತಾರೆ. ಮುಂದೆ ಅಕ್ಟೋಬರ್ 14ರ ಬೌದ್ಧಧರ್ಮ ದೀಕ್ಷೆಯ ಕಾರ್ಯಕ್ರಮಕ್ಕೆ ಸರ್ವರನ್ನೂ ಸ್ವಾಗತಿಸುತ್ತಾ, 1956ರ ನವೆಂಬರ್ 13ರಂದು "ಕೇವಲ ಅಸ್ಪೃಶ್ಯರು ಮಾತ್ರವಲ್ಲ, ಜಾತಿ, ಧರ್ಮದ ಭೇದವಿಲ್ಲದೆ ಬುದ್ಧನ ಬೋಧನೆಗಳಲ್ಲಿ ನಂಬಿಕೆ ಇರುವ ಎಲ್ಲರೂ ಬೌದ್ಧ ಮತವನ್ನು ಆಲಂಗಿಸಿಕೊಳ್ಳಬೇಕು ಹಾಗೂ ದೀಕ್ಷೆಯಲ್ಲಿ ಭಾಗವಹಿಸಬೇಕು.."[15] ಎಂದು ಆಶಿಸುತ್ತಾರೆ.

ಇದೆಲ್ಲದರ ಪರಿಣಾಮಕಾವಾಗಿ ಮತ್ತು ಪೂರ್ವನಿರ್ಧಾರಿತ ಕ್ರಾಂತಿನಡೆಯಾಗಿ ಅಂಬೇಡ್ಕರ್ ಅವರು 1956ರ ಅಕ್ಟೋಬರ್ 14ರಂದು(ಅಶೋಕ ವಿಜಯದಶಮಿ) ನಾಗಪುರದಲ್ಲಿ ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧಧರ್ಮ ದೀಕ್ಷೆಯನ್ನು ಪಡೆಯುತ್ತಾರೆ. ಇದು ಅಶೋಕ ಸಾಮ್ರಾಟನ ನಂತರ ಭಾರತದ ಚರಿತ್ರೆಯಲ್ಲಿ ನಡೆದ ಮಹತ್ತರ ಬೌದ್ಧಸಾಂಸ್ಕೃತಿಕ ಕ್ರಾಂತಿಯ ಅವಿಸ್ಮರಣೀಯ ವಿದ್ಯಮಾನವಾಗಿದೆ. ಈ ಸಂದರ್ಭವನ್ನು ಪ್ರಸಿದ್ಧ ಲೇಖಕರಾದ ವಸಂತಮೂನ್ ಅವರು ದಾಖಲಿಸುವಂತೆ, "…Ambedkar gave an inspiring self confidence to the untouchables who were blind, deaf and dumb. Some called him Moses, some Abraham Lincoln and some Booker T.Washington. He was one in all as far as his accomplishments were concerned. After Emperor Ashok, he was tge great one who brought lakhs of his followers in the fold of Buddhism"[16] ಹೀಗೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ಈ ಭಾರತ ಭೂಮಿ ಕಂಡ ಆಧುನಿಕ ಯುಗದಲ್ಲಿ ಜೀವಕಾರುಣ್ಯ ಜ್ಯೋತಿಯಾಗಿ, ವಿಶ್ವಜ್ಞಾನಿಯಾಗಿ, ಮಹಾ ಬೋಧಿಸತ್ವರೇ ಆಗಿ ಕಂಡುಬರುತ್ತಾರೆ.

ಮುಂದೆ ಅಂಬೇಡ್ಕರ್ ಅವರು ಮೈಸೂರು ರಾಜ್ಯದ ಯೋಜಿತ ಬೌದ್ಧಕೇಂದ್ರದ ಮೂಲಕ ಕೈಗೊಳ್ಳಬೇಕಾದ ಕಾರ್ಯಗಳಿಗೆ ಹಿನ್ನಡೆಯಾಗುತ್ತದೆ. ಕಾರಣ ಧಮ್ಮದೀಕ್ಷೆ ಪಡೆದ ಎರಡು ತಿಂಗಳಲ್ಲಿ ಬಾಬಾಸಾಹೇಬರು ಮಹಾಪರಿನಿಬ್ಬಾಣ ಹೊಂದುತ್ತಾರೆ(1956ರ ಡಿಸೆಂಬರ್ 6). ಬಾಬಾಸಾಹೇಬರಿಲ್ಲದೆ ಬೆಂಗಳೂರಿನ ಈ ಬೌದ್ಧಭೂಮಿ ಏಕಾಂಗಿಯಾಗುತ್ತದೆ. ಆದರೆ ಅಂಬೇಡ್ಕರರೇ ಸ್ಥಾಪಿಸಿದ್ದ 'ಪೀಪಲ್ ಎಜುಕೇಶನ್ ಸೊಸೈಟಿ'ಗೆ ಕರ್ನಾಟಕದ ಪ್ರಖರ ಭೀಮವಾದಿಯಾಗಿದ್ದ ಬಸವಲಿಂಗಪ್ಪ ಅವರು 1964ರಲ್ಲಿ ಟ್ರಸ್ಟಿಯಾಗಿ ನೇಮಕಗೊಂಡ ನಂತರ ಭೀಮ ಕನಸಿನ ಬೌದ್ಧಕಾಯಕಗಳಿಗೆ ಚಾಲನೆ ಸಿಗುತ್ತದೆ. ಬಸವಲಿಂಗಪ್ಪ ಅವರು 1984ರಲ್ಲಿ, 'ನಾಗಸೇನ ಶಿಕ್ಷಣ ಟ್ರಸ್ಟ್' ಪ್ರಾರಂಭಿಸಿ, ಮತ್ತು ಈ ನೆಲಕ್ಕೆ 'ಬುದ್ಧಭೂಮಿ' ಎಂದು ಹೆಸರು ನೀಡುತ್ತಾರೆ. ತದನಂತರದಲ್ಲಿ ಬಸವಲಿಂಗಪ್ಪ ಹಾಗೂ ಕೆ. ಎಚ್. ರಂಗನಾಥ್ ಮೊದಲಾದವರು ಈ ಕೇಂದ್ರವನ್ನು ಅಂಬೇಡ್ಕರ್ ಆಶಯದಂತೆ ಮುನ್ನಡೆಸುತ್ತಾರೆ. ಇಂದಿಗೂ ಬೆಂಗಳೂರಿನಲ್ಲಿ ಮೈಸೂರು ಮಹಾರಾಜರು ಕೊಟ್ಟ ಆ ಭೂಮಿಯಲ್ಲಿ, ಅಂಬೇಡ್ಕರ್ ಕನಸು ಕಂಡ ಕಾರ್ಯಗಳು ಪ್ರಗತಿಯಲ್ಲಿರುವುದು ಹೆಮ್ಮೆಯ ಸಂಗತಿಯಾಗಿದೆ.

ಕರ್ನಾಟಕದಲ್ಲಿ ಬಾಬಾಸಾಹೇಬರ ಯಾನವು ಭಾರತ ಸ್ವಾತಂತ್ರ್ಯಪೂರ್ವದಿಂದಲೇ ಆರಂಭವಾಗಿತ್ತು. ಭಾರತದ ವಿವಿಧ ಭಾಗಗಳಿಗೆ ಸಂಚರಿಸಿ ಅಸ್ಪೃಶ್ಯರನ್ನು ಜಾಗೃತಗೊಳಿಸುವ ಕಾರ್ಯಗಳನ್ನು ಕೈಗೊಂಡು ಮಹಾರಾಷ್ಟ್ರ ಸಮೀಪದ ಕರ್ನಾಟಕದ ಬೆಳಗಾವಿ, ಧಾರವಾಡ ಮೊದಲಾದ ಕಡೆಗಳಲ್ಲಿಯೂ ಸಂಚರಿಸುತ್ತಾರೆ. ಬಹುಮುಖ್ಯವಾಗಿ ಶೋಷಿತವರ್ಗಗಳ ಬಿಡುಗಡೆಯ ಮಹಾಮಾರ್ಗಗಳಾಗಿ ಶಿಕ್ಷಣ, ಹೋರಾಟ, ಸಂಘಟನೆ, ಆತ್ಮವಿಶ್ವಾಸ ಮತ್ತು ನಿರ್ಭೀತ ನಡೆ–ನುಡಿ ಮೊದಲಾದ ಸಂಗತಿಗಳನ್ನು ಬೋಧಿಸುತ್ತಾರೆ. ಈ ಸಂದರ್ಭದಲ್ಲಿ ಕನ್ನಡ ನೆಲದ ಜನತೆಯ ಅಮೋಘ ಬೆಂಬಲವನ್ನು ಪಡೆಯುತ್ತಾರೆ. ಅಂಬೇಡ್ಕರ್ ನಡೆ–ನುಡಿಯ ಪ್ರಭಾವದಿಂದಾಗಿ ಕರ್ನಾಟಕದಾದ್ಯಂತ ನೂರಾರು ಜನನಾಯಕರೂ, ಜನಸಂಘಟನೆಗಳೂ ರೂಪುಗೊಳ್ಳುವಂತಾಗುತ್ತದೆ. ಬೆಳಗಾವಿಯ ದೇವರಾಯ ಇಂಗಳೆಯಿಂದ ಹಿಡಿದು ಕೋಲಾರದ ಚೆನ್ನಯ್ಯರ ವರೆಗೂ ಅನೇಕ ಕನ್ನಡಿಗರು ಬಾಬಾಸಾಹೇಬರ ಒಡನಾಡಿಗಳಾಗುತ್ತಾರೆ.[17] ಹೀಗೆ, ಕರ್ನಾಟಕವೂ ಒಳಗೊಂಡಂತೆ ಭಾರತದ ಬಹುಕ್ಷೇತ್ರಗಳಲ್ಲಿ, ಬಹುಜನರಲ್ಲಿ ಚರಿತ್ರಾರ್ಹವಾದ ಅನೇಕ ಪಲ್ಲಟಗಳು ಉಂಟಾಗುತ್ತವೆ. ಕರ್ನಾಟಕ ಏಕೀಕರಣ ಹಾಗೂ ಕರ್ನಾಟಕ ರಾಜ್ಯೋದಯದ ಸಂದರ್ಭದಲ್ಲಿಯೂ ಭಾಷಾವಾರು ರಾಜ್ಯವಿಂಗಡಣಾ ಆಯೋಗದೊಂದಿಗೆ ಸಕ್ರಿಯರಾಗಿ ಅಂಬೇಡ್ಕರರು ಕರ್ನಾಟಕಕ್ಕೆ ನೀಡಿದ ಕೊಡುಗೆಯೂ ಮಹತ್ತರವಾದುದಾಗಿದೆ.[18] ಇಂಥ ಭೀಮಪ್ರಭಾವಲಯದಿಂದ ಮೈಸೂರು ಸಂಸ್ಥಾನವೂ ಹೊರತಾಗಿರಲಿಲ್ಲ. ಆದಾಗ್ಯೂ ಮೈಸೂರು ಸಂಸ್ಥಾನದೊಂದಿಗೆ ಆಪ್ತವಾದ ಸಂಬಂಧವಿದ್ದ ಅಂಬೇಡ್ಕರರನ್ನು ಯಾಕೆ ಮೈಸೂರು ನಗರಕ್ಕೆ ಆಹ್ವಾನಿಸಲಿಲ್ಲ ಎಂಬುದು ನಿಜಕ್ಕೂ ಸೋಜಿಗವೆನಿಸುತ್ತದೆ ಮತ್ತು ಪ್ರಶ್ನೆಯಾಗಿಯೇ ಉಳಿಯುತ್ತದೆ.

ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ವಿಶ್ವ ಹಾಗೂ ಭಾರತ ಬಗೆಗಿನ ತಿಳಿವಿನಂತೆಯೇ ಮೈಸೂರು ಸಂಸ್ಥಾನ ಒಳಗೊಂಡಂತೆ ಕರ್ನಾಟಕದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಬಗೆಗೂ ಅಗಾಧವಾದ ಅರಿವಿತ್ತು. ಮಧ್ಯಯುಗೀನ ವಚನ ಸಂಸ್ಕೃತಿಯ ಮಹಾಚೇತನವಾದ ಬಸವಣ್ಣನವರ ಬಗ್ಗೆ ಅಂಬೇಡ್ಕರರಿಗೆ ಅಪಾರವಾದ ಗೌರವವಿತ್ತು. ಶ್ರೀ ಎಸ್. ನಿಜಲಿಂಗಪ್ಪ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅವರಿಗೆ ಅಂಬೇಡ್ಕರ್ ಅವರು ಬರೆದ ಒಂದು ಪತ್ರದಲ್ಲಿ, "Basavanna was the great Philosopher and Saint. His idea speaking should love swept the whole world...."[19] ಎಂದಿದ್ದಾರೆ. ಬಸವಣ್ಣನವರನ್ನು ಕುರಿತು ಬಾಬಾಸಾಹೇಬರಿಗೆ ಇಂಥ ಗೌರವ ಮೂಡಲು ಕಾರಣರಾದವರು ಧಾರವಾಡದ ಸರ್ ಸಾಹೇಬರು (ಸರ್ ಸಿದ್ದಪ್ಪ ಕಂಬಳಿಯವರು). ಶಾಹುಮಹರಾಜರ ಮೂಲಕ ಪರಸ್ಪರ ಪರಿಚಯವಾಗಿ ಬಾಬಾಸಾಹೇಬರೊಂದಿಗೆ ಗಾಢವಾದ ಸ್ನೇಹಸಂಬಂಧ ಹೊಂದಿದ್ದವರು ಸರ್ ಸಾಹೇಬರು. ಬಾಬಾಸಾಹೇಬರು ತಮ್ಮ ಪತ್ನಿ ರಮಾಬಾಯಿ ಅವರ ಆರೋಗ್ಯ ನಿಮಿತ್ತ, ಶೈಕ್ಷಣಿಕ ಹಾಗೂ ಸಾಮಾಜಿಕ ಮೊದಲಾದ ಕಾರ್ಯಗಳ ನಿಮಿತ್ತ ಧಾರವಾಡಕ್ಕೆ ಬಂದಾಗಲೆಲ್ಲ ಸರ್ ಸಾಹೇಬರ ಮನೆಯಲ್ಲೇ ಅತಿಥಿಯಾಗುತ್ತಿದ್ದರು. ಸಿದ್ದಪ್ಪ ಕಂಬಳಿ ಅವರ ಸಮಾನತೆಯ ನಡೆ–ನುಡಿಯು ಎಷ್ಟು ಹೃದಯಂಗಮವಾಗಿತ್ತೆಂದರೆ ಬಾಬಾಸಾಹೇಬರು ಸರ್ ಸಾಹೇಬರ ಕುಟುಂಬದ ಸದಸ್ಯರಂತೆಯೇ ಆಗಿಬಿಟ್ಟಿದ್ದರು.[20] ಈ ಬಾಂಧವ್ಯದಲ್ಲೇ ಬಾಬಾಸಾಹೇಬರಿಗೆ ಬಸವಣ್ಣನವರ ಪರಿಚಯವಾಗಿದ್ದು. ಬಸವಣ್ಣನವರನ್ನು ಕುರಿತು ಅಧ್ಯಯನ ನಡೆಸಿದಂತೆಲ್ಲ ಬಸವಾದಿ ಶರಣರು ಕೈಗೊಂಡ ಸಾಮಾಜಿಕ ನ್ಯಾಯದ ಪರವಾದ ತ್ಯಾಗ, ಹೋರಾಟಗಳು ಅಂಬೇಡ್ಕರರಿಗೆ ಆಪ್ತವೆನಿಸುತ್ತವೆ. ಆಗ ಬಾಬಾಸಾಹೇಬರು ಧಾರವಾಡದ ಬಸವಯಾನಿಗಳೊಂದಿಗೆ, "..ಇಂಥ ವಿಚಾರಗಳನ್ನು ನಿಮ್ಮಲ್ಲಿಯೇ ಇಟ್ಟಕೊಂಡಿದ್ದೀರಿ. ಬೇರೆ ಕಡೆ ಪ್ರಚಾರ ಮಾಡದೆ ಅನ್ಯಾಯ ಮಾಡಿದ್ದೀರಿ. ನಮಗೆ ತಿಳಿಸಿದ್ದರೆ ನಾವು ಪ್ರಚಾರ ಮಾಡುತ್ತಿದ್ದೆವು. ಅವರ ತತ್ವಗಳನ್ನು ಸ್ವೀಕರಿಸುತ್ತಿದ್ದೆವು..."[21] ಎಂದು ತಿಳಿಸುತ್ತಾರೆ. ಹೀಗೆ ಅಂದಿನ 'ಸಮಗ್ರ ಮೈಸೂರು ರಾಜ್ಯ'ದಲ್ಲಿ ಅಂಬೇಡ್ಕರರು ನಡೆಸಿದ ಪ್ರಜಾಪ್ರಭುತ್ವವಾದೀ ಅನುಸಂಧಾನಯಾನವು ಮನೋಜ್ಞವಾದುದಾಗಿದೆ.

ಒಟ್ಟಿನಲ್ಲಿ ಬಾಬಾಸಾಹೇಬರು ಭಾರತ ದೇಶಕ್ಕೆ ಯಾವ ಧಕ್ಕೆಯೂ ಉಂಟಾಗದಂತೆ ಈ ನೆಲದಲ್ಲಿ ಸೀಮಾತೀತ ಬೌದ್ಧಯಾನವನ್ನು ಕೈಗೊಂಡರು. ಅವರಿಗೆ ಬೌದ್ಧಚಳವಳಿ ನಿಮಿತ್ತವಾಗಿ ಇದ್ದ ದೂರದೃಷ್ಟಿ ಮತ್ತು ಕರ್ನಾಟಕ ಭೂಮಿಯಲ್ಲಿ ಅವರು ನಡೆಸಿದ ಬೌದ್ಧಯಾನವು ಅಪೂರ್ವವಾದ ಸಾಂಸ್ಕೃತಿಕ ದಾಖಲೆಯಾಗಿದೆ.ಇಂದು ಬಹುಪಾಲು ದಮನಿತ ಜನತೆ ಬೌದ್ಧಧರ್ಮಕ್ಕೆ ನಡೆಯಬೇಕೋ ಬೇಡವೋ ಎಂಬ ತೊಳಲಾಟದಲ್ಲಿ ಇರುವಾಗ ಅಂದೇ ಅಂಬೇಡ್ಕರರು ನಡೆಸಿರುವ ಬೌದ್ಧಪ್ರಜ್ಞಾಯಾನವು ನಿಜಕ್ಕೂ ಚೇತೋಹಾರಿಯಾದುದು. ಈ ನೆಲದಲ್ಲಿ ಬಾಬಾಸಾಹೇಬರು ಕ್ರಾಂತಿಕಾರಕ ಬೌದ್ಧಯಾನವನ್ನು ಕೈಗೊಂಡಿದ್ದು ಪ್ರಜಾಪ್ರಭುತ್ವದ ಆಶಯಕ್ಕೆ ಪೂರಕವಾದುದೇ ಆಗಿದೆ. ಈ ದಿಸೆಯಲ್ಲಿ ತಮ್ಮ ಬೌದ್ಧಯಾನವು ತಡವಾಯಿತೆಂಬ ಬೇಸರವಿದ್ದಾಗ್ಯೂ ತಮ್ಮ ಒಡನಾಡಿ ಬೌದ್ಧರಾದ ಶೋಷಿತ ಜನರು ಬೌದ್ಧಧರ್ಮವನ್ನು ಭಾರತದಲ್ಲಿ ಸಂಸ್ಥಾಪನೆ ಮಾಡುತ್ತಾರೆಂದು ಭರವಸೆಯೂ ಅವರಿಗಿತ್ತು."…struggling throughout my life to abolish this evil practice of division based on caste and mutual hatred. In reality, I feel guilty of starting late the work of revival of Buddhism in India. But even then I hope and believe

that my people who, sacrificing their own comforts, have been faithfully following me. I hope and I trust they will continue to struggle sincerely to propagate the Buddha Dhamma in India."[22] ಹೀಗಾಗಿ ಶೋಷಿತರು ಭೀಮಬೆಳಕಿನಲ್ಲಿ ಸಾಗುವುದೆಂದರೆ, 'ಭಾರತ ಸಂವಿಧಾನ'ವನ್ನು ನಿತ್ಯವೂ ಬೆಳಗುತ್ತ ಜಾತೀಯತೆ ಹಾಗೂ ಮತೀಯತೆಯನ್ನು ಮೀರಿದ ಮಾನವೀಯತೆಯನ್ನು ಜೀವಿಸುವುದೇ ಆಗಿದೆ. ಅಂಥ ಮಹತ್ಕಾರ್ಯಕ್ಕಾಗಿ ದೃಢವಿಶ್ವಾಸದಿಂದ ಮುನ್ನಡೆಯುವ ಬಗ್ಗೆ ಅಂಬೇಡ್ಕರ್ ಅವರೇ ಒಮ್ಮೆ ತಮ್ಮ ಜನ್ಮದಿನದಂದು ಪತ್ರಿಕೆಯೊಂದಕ್ಕೆ ನೀಡಿದ ಸಂದೇಶದಲ್ಲಿ, "...ಒಳ್ಳೆಯದೇ ಬರಲಿ, ಕೆಟ್ಟದ್ದೇ ಬರಲಿ, ಮಳೆಯೇ ಬರಲಿ, ಬಿಸಿಲೇ ಇರಲಿ, ಮಾನಾಪಮಾನಗಳು ಎದುರಾಗಲಿ, ಎದೆಗುಂದದೆ ಮುನ್ನಡೆದು, ಸಂಪೂರ್ಣ ಮಾನವತ್ವವನ್ನು ಪಡೆಯುವವರೆಗೆ ತಾವು ವಿರಮಿಸುವುದಿಲ್ಲ ಎನ್ನುವವರು ಪುಣ್ಯವಂತರು"[23] ಎಂದಿರುವುದು ಇಂದಿಗೂ ಮನನೀಯವಾಗಿದೆ. 'ಅರಿವೇ ಅಂಬೇಡ್ಕರ, ಗುರುವೇ ಅಂಬೇಡ್ಕರ'.

**ಕೊನೆ ಟಿಪ್ಪಣಿಗಳು:**


1. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು; ಸಂಪುಟ–20; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; ಮೊದಲ ಮುದ್ರಣ 2015; ಪುಟ 629–630.
2. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು; ಸಂಪುಟ–20; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; ಮೊದಲ ಮುದ್ರಣ 2015; ಪುಟ 111.
3. Dr. B. R. AMBEDKAR LIFE AND MISSION; DHANANJAY KEER; BOMBAY POPULAR PRAKASHAN, BOMBAY; First published: 1954; P.287.
4. ಕುವೆಂಪು ಸಮಗ್ರಗದ್ಯ–ಸಂಪುಟ–2; ಸಂ. ಡಾ. ಕೆ. ಸಿ. ಶಿವಾರೆಡ್ಡಿ; ಕನ್ನಡ ವಿಶ್ವವಿದ್ಯಾಲಯ, ಹಂಪಿ; 2004; ಪುಟ 500.
5. ಕುವೆಂಪು ಸಮಗ್ರ ಗದ್ಯ–ಸಂಪುಟ–2; ಸಂ. ಡಾ. ಕೆ. ಸಿ. ಶಿವಾರೆಡ್ಡಿ; ಕನ್ನಡ ವಿಶ್ವವಿದ್ಯಾಲಯ, ಹಂಪಿ; 2004; ಪುಟ 1072.
6. ಕುವೆಂಪು ಸಮಗ್ರ ಕಾವ್ಯ–ಸಂಪುಟ–2; ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ; 2013; ಪುಟ 204.
7. ಕುವೆಂಪು ಸಮಗ್ರಗದ್ಯ–ಸಂಪುಟ–2; ಸಂ. ಡಾ. ಕೆ. ಸಿ. ಶಿವಾರೆಡ್ಡಿ; ಕನ್ನಡ ವಿಶ್ವವಿದ್ಯಾಲಯ, ಹಂಪಿ; 2004; ಪುಟ 490–491.
8. ಸಂಪೂರ್ಣ ವರದಿಗಾಗಿ ನೋಡಿ: ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು; ಸಂಪುಟ–18; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; ಮೊದಲ ಮುದ್ರಣ 2015; ಪುಟ 700–705.
9. https://sites.google.com/site/msvkgf/my-books/kgf-memmories-part-1-1945-to-55
10. Dr. AMBEDKAR LIFE AND MISSION; DHANANJAY KEER; BOMBAY POPULAR PRAKASHAN, BOMBAY; First published: 1954; P.483-484.
11. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು; ಸಂಪುಟ–18; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; ಮೊದಲ ಮುದ್ರಣ 2015; ಪುಟ 705.
12. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು; ಸಂಪುಟ–17; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; ಮೊದಲ ಮುದ್ರಣ 2015; ಪುಟ 381.
13. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು; ಸಂಪುಟ–17; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; ಮೊದಲ ಮುದ್ರಣ 2015; ಪುಟ 381.
14. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು; ಸಂಪುಟ–20; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; ಮೊದಲ ಮುದ್ರಣ 2015; ಪುಟ 801.
15. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು; ಸಂಪುಟ–17; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; ಮೊದಲ ಮುದ್ರಣ 2015; ಪುಟ 397.
16. Dr. Babasaheb Ambedkar; Vasnat Moon; Translated from Marathi to English-Asha Damle; National Book Trust, New Delhi; 1991; Page 221.
17. ಮೈಸೂರು ಸಂಸ್ಥಾನದಲ್ಲಿ ಎಸ್.ಎಂ.ಸಿದ್ಧಯ್ಯ, ಎನ್.ರಾಚಯ್ಯ, ಬಿ.ರಾಚಯ್ಯ ಮೊದಲಾದವರು ಅಂಬೇಡ್ಕರರೊಂದಿಗೆ ಹತ್ತಿರದ ಒಡನಾಡ ಸಾಧಿಸಿದ್ದರು. ಹೆಚ್ಚಿನ ಮಾಹಿತಿಗೆ ನೋಡಿ: ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು; ಡಾ.ಎನ್.ಚಿನ್ನಸ್ವಾಮಿ ಸೋಸಲೆ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; 2013.
18. ಹೆಚ್ಚಿನ ಮಾಹಿತಿಗೆ ಓದಿ: ಕರ್ನಾಟಕದ ಉದಯಕ್ಕೆ ಕಾರಣವಾದ ಅಂಬೇಡ್ಕರ್ ಚಿಂತನೆಗಳು; ಲೇಖಕರು – ರಘೋತ್ತಮ.ಹೊ.ಬ; ವಾರ್ತಾಭಾರತಿ ದಿನಪತ್ರಿಕೆ; ದಿನಾಂಕ–15/11/2017.
19. ಉದ್ಧೃತ: ವಚನ ವೈಭವ; ಶಂಕರ ಮ.ಪಾಟೀಲ; ಸಂಗಮ ಪ್ರಕಾಶನ, ಕೊಲ್ಹಾಪುರ, ಮಹಾರಾಷ್ಟ್ರ; 2013; ಪುಟ 251.
20. ಹೆಚ್ಚಿನ ಮಾಹಿತಿಗೆ ಓದಿ: ಸರ್ ಸಾಹೇಬರು(ಸಿದ್ದಪ್ಪ ಕಂಬಳಿಯವರು); ಪಾಟೀಲ ಪುಟ್ಟಪ್ಪ; ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಸಂಸ್ಥಾನಮಠ; ಗದಗ; 1982; ಪುಟ 81–84.
21. ಪ್ರಜಾವಾಣಿ ದಿನಪತ್ರಿಕೆ; ಅಕ್ಟೋಬರ್ 2, 2017; ಪುಟ 4.
22. Dr. BabaSaheb Ambedkar Writings and Speeches; Volume 17-part-01; First Edition by Education Department, Govt. of Maharashtra: Re-printed by Dr. Ambedkar Foundation: 2014; page 450.
23. ಮದರಾಸಿನ ಜೈಭೀಮ್ ಪತ್ರಿಕೆಯ ಡಾ.ಅಂಬೇಡ್ಕರ್ ಅವರ ಜನ್ಮದಿನದ ವಿಶೇಷಾಂಕ; 1947ರ ಏಪ್ರಿಲ್ 13.; ಪೂರ್ಣ ವಿವರಗಳಿಗೆ ನೋಡಿ: ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು; ಸಂಪುಟ–17; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; ಮೊದಲ ಮುದ್ರಣ 2015; ಪುಟ 472–473.

**ಪರಾಮರ್ಶನ ಗ್ರಂಥಗಳು:**


1. Dr. B. R. AMBEDKAR LIFE AND MISSION; DHANANJAY KEER; BOMBAY POPULAR PRAKASHAN, BOMBAY; First published: 1954.
2. ಸರ್ ಸಾಹೇಬರು(ಸಿದ್ದಪ್ಪ ಕಂಬಳಿಯವರು); ಪಾಟೀಲ ಪುಟ್ಟಪ್ಪ; ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಸಂಸ್ಥಾನಮಠ; ಗದಗ; 1982.
3. Dr. Babasaheb Ambedkar; Vasnat Moon; Translated from Marathi to English-Asha Damle; National Book Trust, New Delhi; 1991.
4. ಕುವೆಂಪು ಸಮಗ್ರ ಗದ್ಯ–ಸಂಪುಟ–2; ಸಂ. ಡಾ. ಕೆ. ಸಿ. ಶಿವಾರೆಡ್ಡಿ; ಕನ್ನಡ ವಿಶ್ವವಿದ್ಯಾಲಯ, ಹಂಪಿ; 2004.
5. ಕುವೆಂಪು ಸಮಗ್ರ ಕಾವ್ಯ–ಸಂಪುಟ–2; ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ; 2013.
6. ವಚನ ವೈಭವ; ಶಂಕರ ಮ.ಪಾಟೀಲ; ಸಂಗಮ ಪ್ರಕಾಶನ, ಕೊಲ್ಹಾಪುರ, ಮಹಾರಾಷ್ಟ್ರ; 2013.
7. ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು; ಡಾ.ಎನ್.ಚಿನ್ನಸ್ವಾಮಿ ಸೋಸಲೆ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; 2013
8. Dr. BabaSaheb Ambedkar Writings and Speeches; Volume 17-part-01; First Edition by Education Department, Govt. of Maharashtra: Re-printed by Dr. Ambedkar Foundation: 2014.
9. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು; ಸಂಪುಟ 1–22; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; ಪರಿಷ್ಕೃತ ಮುದ್ರಣ; 2015.